ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/44/2014-15. ದಿನಾಂಕ:06-09-2016.

| ವಾದಿಗಳು | ಪ್ರತಿವಾದಿಗಳು |
| --- | --- |
| 1)ಪಾಲಪ್ಪ ಮೈಗಾ ತಾಯಿ ಸೂರಮ್ಮ<br>2)ಓಬಳೇಶ ತಂದೆ ಲೇಟ್ ಮೂಗಬಸಪ್ಪ<br>3)ದುರುಗಪ್ಪ ತಂದೆ ಲೇಟ್ ಶೇಟ್ರು ಸಣ್ಣ ಓಬಯ್ಯ<br>ಚೌಡಾಪುರ ಗ್ರಾಮ ಕೂಡ್ಲಿಗಿ ತಾಲೂಕು | ಲಕ್ಷ್ಮೀದೇವಿ ತಂದೆ ಮಳ್ಳಪ್ಪ<br>ಚೌಡಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು |

ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 763/ಎ. ವಿಸ್ತೀರ್ಣ 3-67. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 763/ಎ. ವಿಸ್ತೀರ್ಣ 3-67. ಎಕ್ರೆ ಜಮೀನನ್ನು ಸದರಿ ಗ್ರಾಮದ ಓಬಳೇಶ ತಂದೆ ಲೇಟ್ ಮೂಗಬಸಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಚೌಡಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 17-07-2014. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಮೂಲ ಪಟ್ಟದಾರರು ಸಹಿ ಮಾಡಿಲ್ಲದ ಕಾರಣ ವಂಶವೃಕ್ಷ ತಾಳೆ ಇಲ್ಲದ ಕಾರಣ ಮತ್ತು ಹಳೇ ಪಹಣಿ ಲಗತ್ತಿಸಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 2/2014-15.ದಿನಾಂಕ18-08-2014. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 24-02-2015 ರಿಂದ 06-09-2016 ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಚೌಡಾಪುರ ಗ್ರಾಮದ ಸನಂ 763/ಎ. ವಿಸ್ತೀರ್ಣ 3-67. ಎಕ್ರೆ ಜಮೀನು ಅರ್ಜಿದಾರರ ಅಜ್ಜನವರಾದ ಅಗಳಗಡ್ಡಿ ದೊಡ್ಡ ಓಬಯ್ಯ ಮತ್ತು ಇವರ ತಮ್ಮನಾದ ಶೆಟ್ರು ಸಣ್ಣ ಓಬಯ್ಯ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಸದರಿ ದೊಡ್ಡ ಓಬಯ್ಯ ಇವರು ದಿನಾಂಕ 06-03-1974 ರಂದು ಇವರ ಹೆಂಡತಿ ಮೂಗಮ್ಮ ಇವರು ದಿನಾಂಕ 08-06-1976. ರಂದು ಮತ್ತು ಅರ್ಜಿದಾರರ ತಂದೆಯಾದ ಮೂಗಬಸಪ್ಪ ಇವರು ದಿನಾಂಕ 08-03-2000 ರಂದು ಮತ್ತು ಅರ್ಜಿದಾರರ ತಾಯಿಯವರಾದ ದುರುಗಮ್ಮ ಇವರು 08-06-1980 ರಂದು ಮತ್ತು ಸದರಿ ಶೆಟ್ರು ಸಣ್ಣ ಓಬಯ್ಯ ಇವರು ದಿನಾಂಕ 09-10-1984 ರಂದು ಮತ್ತು ಇವರ ಹೆಂಡತಿ ಸೂರಮ್ಮ ಇವರು ದಿನಾಂಕ 03-8-1999 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಅಗಳಗಡ್ಡಿ ದೊಡ್ಡ ಓಬಯ್ಯ ಮತ್ತು ಶೆಟ್ರು ಸಣ್ಣ ಓಬಯ್ಯ ಇವರುಗಳ ಹೆಸರುಗಳನ್ನು ಕಡಿಮೆ ಮಾಡಿ ಅರ್ಜಿದಾರರಾದ ಓಬಳೇಶ ತಂದೆ ಲೇಟ್ ಮೂಗಬಸಪ್ಪ. ದುರುಗಪ್ಪ ತಂದೆ ಲೇಟ್ ಶೆಟ್ರು ಸಣ್ಣ ಓಬಯ್ಯ ಇವರುಗಳ ಹೆಸರುಗಳನ್ನು ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಪು.ತಿ.ನೊ-2

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಪ್ರತಿವಾದಿಯ ಪಿತ್ರಾರ್ಜಿತ ಜಮೀನು ಆಗಿದ್ದು ಸದರಿ ಜಮೀನು ಮೂಲತಹ ಪ್ರತಿವಾದಿಯ ಅಜ್ಜನಾದ ಮಾರೆಪ್ಪಗಾರಿ ಅಗಳಗಡ್ಡಿ ಮಾರೆಪ್ಪ ಎಂದು ಡಯಾಗ್ಲಾಟ್ ಪ್ರಕಾರ ನಮೂದು ಇರುತ್ತದೆ. ಸದರಿ ಮಾರಪ್ಪಗಾರಿ ಅಗಳಗಡ್ಡಿ ಮಾರೆಪ್ಪ ಇವರಿಗೆ ಇಬ್ಬರು ಮಕ್ಕಳಾದ ಅಗಳಗಡ್ಡಿ ದೊಡ್ಡ ಓಬಯ್ಯ, ಶೆಟ್ರು ಸಣ್ಣ ಓಬಯ್ಯ ಎಂದು ಇದ್ದು ಸದರಿ ಅಗಳಗಡ್ಡಿ ದೊಡ್ಡ ಓಬಯ್ಯ ಇವರಿಗೆ ಇಬ್ಬರು ಹೆಂಡತಿಯರಾದ ತಿಮ್ಮಕ್ಕ, ಮೂಗಮ್ಮ, ಎಂಬುವವರಿದ್ದು ಸದರಿ ತಿಮ್ಮಕ್ಕಳಿಗೆ ಎಂಟು ಜನ ಮಕ್ಕಳಿದ್ದು ಅದರಲ್ಲಿ ಪ್ರತಿವಾದಿಯು ಎಂಟನೇ ಮಗಳಾಗಿರುತ್ತಾಳೆ ಸದರಿ ಜಮೀನು ಪ್ರತಿವಾದಿಗೆ ಸಂಬಂದಿಸಿದ ಜಮೀನು ಆಗಿರುವ ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ವಿವಾದವು ಸಿವಿಲ್ ಸ್ವರೂಪವೆಂದು ಕಂಡು ಬಂದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 763/ಎ. ವಿಸ್ತೀರ್ಣ 3-67. ಎಕ್ರೆ ಜಮೀನಿನ ವಿವಾದವು ಸಿವಿಲ್ ಸ್ವರೂಪವೆಂದು ಕಂಡು ಬಂದ ಕಾರಣ ಉಭಯರು ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡು ಕೊಳ್ಳಲು ಸೂಚಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 06-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಓಬಳೇಶ ತಂದೆ ಲೇಟ್ ಮೂಗಬಸಪ್ಪ, ದುರುಗಪ್ಪ ತಂದೆ ಲೇಟ್ ಶೆಟ್ರ ಸಣ್ಣ ಓಬಯ್ಯ ಚೌಡಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ರಮೇಶ ಆರ್. ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಲಕ್ಷ್ಮೀದೇವಿ ತಂದೆ ಮಳ್ಳಪ್ಪ ಚೌಡಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎ.ಶಿವರಾಜ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.